**ಸಿ.ಸಿ. ನಂಬ್ರ: 2287/2017** **PW-2**

ದಿನಾಂಕ: 19.09.2025

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: ಆರೋಪಿತರ ಪರ ವಕೀಲರಾದ ಶ್ರೀ ಎಂ ಡಿ ಎಸ್ ರವರಿಂದ:**

ಚಾಸಾ-1 ರವರು ನಮ್ಮ ಪಕ್ಕದ ಮನೆಯವರು. ನಮ್ಮ ಮನೆಗಳ ನಡುವೆ ಅರ್ಧ ಫರ್ಲಾಂಗು ದೂರ ಇದೆ. ಆತ ನನ್ನ ಸ್ನೇಹಿತರು. ಆತನ ವಿರುದ್ದ ಸಾಕಷ್ಟು ಪ್ರಕರಣಗಳು ಇವೆ ಎಂದರೆ ಸರಿ. ರಸ್ತೆ ವಿಚಾರದಲ್ಲಿ ಅವರ ಮತ್ತು ಆರೋಪಿತರ ನಡುವೆ ತಕರಾರು ಇರುತ್ತದೆ ಎಂದರೆ ಸರಿ. ಚಾಸಾ-1 ರವರು ಸದ್ರಿ ಸ್ಥಳವನ್ನು ಕ್ರಯ ಮಾಡಿ ಪಡೆದುಕೊಂಡಿರುತ್ತಾರೆ ಎಂದರೆ ಸರಿ. ಮೊದಲಿಗೆ ಗದ್ದೆ ಇದ್ದು ಅನಂತರ ಸರಿಗೆ ಬೇಲಿ ಅಳವಡಿಸಿರುತ್ತಾರೆ. ಆತನ ಜಾಗದ ಪಶ್ಚಿಮ ದಿಕ್ಕಿಗೆ ಉತ್ತರ ದಕ್ಷಿಣಕ್ಕೆ ರಸ್ತೆ ಹಾದು ಹೋಗುತ್ತದೆ ಎಂದರೆ ಸರಿ. ಅದರ ಗಡಿಯಲ್ಲಿ ಬೇಲಿ ಇತ್ತು. ಬೇಲಿಯ ಹೊರಗೆ ಜನ ಹೆಚ್ಚಾಗಿ ತಿರುಗಾಡುವುದಿಲ್ಲ. ಸುನೀಲ್ ಖಾರ್ವಿ ಮತ್ತು ಚಾಸಾ-1 ರವರ ಜಾಗದ ಮಧ್ಯ ಸದ್ರಿ ದಾರಿ ಬರುತ್ತದೆ ಎಂದರೆ ಸರಿ. ಸುನೀಲ್ ಖಾರ್ವಿ ರವರ ಜಾಗಕ್ಕೆ ಕಂಪೌಂಡು ಹಾಕಿರುತ್ತಾರೆ ಎಂದರೆ ಸರಿ.

ತಕರಾರಿನ ಜಾಗ ಬೇಲಿಯ ಹೊರಗೆ ಇರುತ್ತದೆ ಎಂದರೆ ಸರಿ. ಜಾಗವನ್ನು ಖರೀದಿಸಿದ ನಂತರ ಬೇಲಿ ಹಾಕಿರುತ್ತಾರೆ ಎಂದರೆ ಸರಿ. ಅದೇ ವಿಚಾರದಲ್ಲಿ ತಕರಾರು ಪ್ರಾರಂಭವಾಗಿರುತ್ತದೆ ಎಂದರೆ ಸರಿ. ಅವರ ನಡುವೆ ಸಿವಿಲ್ ದಾವೆಗಳು ಬಾಕಿ ಇರುವ ಬಗ್ಗೆ ನನಗೆ ತಿಳಿದಿಲ್ಲ. ನಾನು ಸೆಂಟ್ರಿಂಗ್ ಕೆಲಸ ಮಾಡುತ್ತೇನೆ. 2016ರ ಯಾವ ತಿಂಗಳಲ್ಲಿ ಗಲಾಟೆಯಾಗಿರುತ್ತದೆ ಎಂದು ನೆನಪಿಲ್ಲ. ಆಗ ಬೆಳಗ್ಗೆ 10-30 ಆಗಿತ್ತು. ನಾನು ಮನೆಯಲ್ಲಿ ಚಾ ಕುಡಿಯುತ್ತಿದ್ದೆ. ಗಲಾಟೆಯಾಗುತ್ತಿದೆ ಎಂದು ಸತೀಶ್ ಎನ್ನುವವರು ಬಂದು ತಿಳಿಸಿರುತ್ತಾರೆ. ಆಗ ಆರೋಪಿತರೆಲ್ಲರೂ ಮರ ಕಡಿದು ಮಣ್ಣು ಹಾಕುತ್ತಿದ್ದರು. ಅದಕ್ಕಾಗಿ ಗರಗಸ, ಕತ್ತಿ ಉಪಯೋಗಿಸುತ್ತಿದ್ದರು. ಸುಮಾರು 15 ಜನರು ಇದ್ದು ಪಂಚಾಯಿತಿಯವರು ಇದ್ದರು. ಪಂಚಾಯಿತಿಯ ನಾರಾಯಣ ಮತ್ತು ಜಯಂತಿ ಇದ್ದರು. ಯಾರು ರಸ್ತೆ ಮಾಡಿದ್ದು ಎಂದು ನನಗೆ ತಿಳಿದಿಲ್ಲ. 3 ಲೋಡು ಮಣ್ಣು ಹಾಕಿರುತ್ತಾರೆ. ಅಲ್ಲಿ ಲಾರಿ ಇತ್ತು. ನಾನು ಹೋಗುವಾಗ 11 ಗಂಟೆಯಾಗಿದ್ದು ಇನ್ನೂ ಕೆಲಸ ಮಾಡುತ್ತಿದ್ದರು. ನಾನು ಅಲ್ಲೇ ಅರ್ಧ ಗಂಟೆ ಇದ್ದೆ. ಪೊಲೀಸರು ಬರುವ ವೇಳೆಗೆ ನಾನು ಇರಲಿಲ್ಲ. ನಾನು ಹೋಗುವಾಗ ಮಣ್ಣು ಹಾಕಿ ರಸ್ತೆ ಶುಚಿಗೊಳಿಸುತ್ತಿದ್ದರು. ಅಲ್ಲಿ

ಯಾವುದೇ ಗಲಾಟೆಯಾಗುತ್ತಿರಲಿಲ್ಲ. ಆದರೆ ಅಲ್ಲಿದವರು ಅವಾಚ್ಯವಾಗಿ ನಿಂಧಿಸಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿಲ್ಲ.

ತಕರಾರು ಇರುವ ದಾರಿಗೂ ನಮಗೂ ಯಾವುದೇ ಸಂಬಂಧವಿಲ್ಲ. ಅದು ಪಶ್ಚಿಮ ದಿಕ್ಕಿನಲ್ಲಿ ಹಾದು ಹೋಗುವುದಿಲ್ಲ. ಅವರ ನಡುವೆ ಏನೆಲ್ಲಾ ಗಲಾಟೆಯಾಗಿದೆ ಎಂದು ನಾನು ನೋಡಿಲ್ಲ. ಸದ್ರಿ ದಿನ ಆರೋಪಿತರು ಹಾರೆ, ಗರಗಸ ಹಾಗೂ ಜೆಸಿಬಿಯನ್ನು ಉಪಯೋಗಿಸಿ ರಸ್ತೆಗೆ ಮಣ್ಣು ಹಾಕಿದ ಕೃತ್ಯ ಎಸಗಿಲ್ಲ ಎಂದರೆ ಸರಿಯಲ್ಲ. ನಾನು ಹೋದಾಗ ಚಾಸಾ-1 ರವರು ಮನೆಯ ಒಳಗಿನಿಂದ ನೋಡುತ್ತಿದ್ದರು. ನಾನು ಪೊಲೀಸರು ತಯಾರಿಸಿದ ದಾಖಲೆಗಳಿಗೆ ಯಾವುದೇ ಸಹಿ ಮಾಡಿಲ್ಲ.

ಚಾಸಾ-1 ರವರು ತಾನು ದೂರು ದಾಖಲಿಸಿದ್ದು ಅದಕ್ಕೆ ಅನುಗುಣವಾಗಿ ಸಾಕ್ಷಿ ನುಡಿಯುವಂತೆ ಕೋರಿಕೊಂಡ ಮೇರೆಗೆ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ. ಯಾರೆಲ್ಲರ ವಿರುದ್ಧ ಏನೆಲ್ಲಾ ಅಪಾದನೆ ಮಾಡಿ ದೂರು ದಾಖಲಿಸಿದ್ದಾರೆ ಎಂದು ನನಗೆ ತಿಳಿದಿಲ್ಲ ಎಂದರೆ ಸರಿ. ಅವರು ಹೇಳಿದಂತೆ ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿ.

**ಮರು ವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ